ಸಚಿವರು ಈ ಕಡೆ ಸ್ವಲ್ಪ ಹೆಚ್ಚಿನ ಗಮನ ಹರಿಸಿ ಈ ಬರ ಪರಿಹಾರ ಕಾಮಗಾರಿಗಳನ್ನು ಮುಂದುವರಿಸಬೇಕು... ಈಗ ಜತ್ತನೆ ಬೀಜಗಳನ್ನು ಕೊಟ್ಟರು ಕೂಡಾ ರೈತರುಗಳು ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ಕೆಲವು ಕಡೆ ಇದೆ. ಆದ್ದರಿಂದ ರೆವಿನ್ಯೂ ಇಲಾಖೆಯು ಅಧಿಕಾರಿಗಳಿಂದ ಲೇಟೆಸ್ಟ್ ರಿಪೋರ್ಟ್‌ನ್ನು ತರಿಸಿಕೊಂಡು, ಬರುವಷ್ಟರಲ್ಲಿ ಈ ಬರ ಪರಿಹಾರ ಕೆಲಸಗಳನ್ನು ಮುಂದುವರಿಸುವಂತೆ ಹಾಗೂ ಜತ್ತನೆ ಬೀಜಗಳನ್ನು ಎಲ್ಲಿಗೆ ಬೇಕೋ ಅಲ್ಲಿಗೆ ಸಪ್ಲೈ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಮಲ್ಲಿಕಾರ್ಜುನ ಖಿರ್ಗೆ.—ಅಧಿಕಾರಿಗಳ ಕೊರ್ವಂಥ ಎಲ್ಲಾ ಸಲಹೆಗಳನ್ನು ನಾನು ಪರಿಶೀಲಿಸುತ್ತೇನೆ. ಈಗಾಗಲೇ ಕೆಲವು ಕಡೆ ಸಹಾಯ ಮಾಡುತ್ತಿದ್ದೇವೆ. ಈ ಬಗ್ಗೆ ಗಮನ ಕೂಡ ಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಖಂಡಿತವಾಗಿ ಈ ಬಗ್ಗೆ ಗಮನ ಕೊಡುತ್ತೇವೆ

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಒಂದು ನಿರ್ದಿಷ್ಟ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ ವಾಸ್ತವಾಂಶಗಳನ್ನು ಪಟ್ಟಿ ಮಾಡಿ ಹೇಳಿದ್ದಾರೆ. ನಾನು ಹೇಳುವುದಕ್ಕೆ ಇಚ್ಛಿಸುವ ಅಂಶ ಏನೆಂದರೆ, ವಾಸ್ತವಾಂಶಗಳನ್ನು ಅವರು ಗುರುತಿಸುವುದಕ್ಕೆ ಆಳವಡಿಸಿಕೊಂಡಿರುವಂಥ ಪದ್ಧತಿ ಬಗ್ಗೆ ದೋಷಪೂರ್ಣವಾಗಿದೆ. ಈಗ ಒಂದು ಗಿಂ ದಿವಸದ ಕೆಳಗೆ ಹಿಂದಿನ ಕಂದಾಯ ಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದರು. ಆಗ ಇವನ್ನು ಯಾವ ರೀತಿ ಪತ್ತೆ ಮಾಡುತ್ತೀರಿ, ರೈನ್ ಫಾರ್ ಸ್ಯಾಟಲೈಟಿಕ್ ಮೇಲೆ ಪತ್ತೆ ಮಾಡುತ್ತೀರಾ ಎಂದು ಕೇಳಿದೆ. ಅದಕ್ಕೆ ಕಂದಾಯ ಕಾರ್ಯದರ್ಶಿಗಳು ನಮಗೆ ಸ್ಯಾಟಲೈಟ್ ಫೋಟೋಗ್ರಾಫ್‌ನ್ನು ತೋರಿಸಿದರು. ಸ್ಯಾಟಲೈಟ್ ಫೋಟೋಗ್ರಾಫ್ ಮೂಲಕ ಇವನ್ನು ನಾವು ಪತ್ತೆ ಮಾಡುತ್ತೇವೆಂದು ಹೇಳಿದರು. ನಾನು ಅವರಿಗೆ ಹೇಳಿದೆ. ಈಗಾಗಲೇ ನದ್ದಾಲ್ಲಿ ಮಿನಿ ಸೆಟಲೈಟ್ಸ್ ಇವೆ. ನಾನು ಯಾರನ್ನು ಮಿನಿಸೆಟ್‌ಲೈಟ್ ಎಂದೂ ಕರೆದಿದ್ದೇನೆ ಎಂಬುದು ಮಾನ್ಯ ಕಂದಾಯ ಸಚಿವರಿಗೆ ಗೊತ್ತು. ಈ ವಿಲೇಜ್ ಅಕೌಂಟೆಂಟ್ ಏನಿದ್ದಾನೆ ಅವನು ಭೂಮಿಯು ಹತ್ತಿರ, ಬೆಳೆಯ ಹತ್ತಿರ ಹೋಗುವುದಿಲ್ಲ. ಅಷ್ಟೇ ಅಲ್ಲ, ಸಂಬಂಧಪಟ್ಟ ತನ್ನ ಗ್ರಾಮದಲ್ಲಿಯೇ ಇರುವುದಿಲ್ಲ. ಆತನು ಊರಿನ ಆಚೆಗೆ ರಿಪೋರ್ಟ್ ಸೆಟ್ಟಿಂಗ್ ಮಾಡಿಕೊಂಡು ಕುಳಿತಿರುತ್ತಾನೆ. ಅಲ್ಲಿ ಅಣಿಪಾರಿ ಮಾಡುತ್ತಾ ಇರುತ್ತಾನೆ. ಕಂದಾಯ ಇಲಾಖಾ ಕಾರ್ಯದರ್ಶಿಯವರು ಇಂಡಿಯಾ ದೇಶದ ಸೆಟಿಲೈಟ್ ಫೋಟೋಗ್ರಾಫ್‌ನ್ನು ನಮಗೆ ತೋರಿಸುತ್ತಾರೆ. ಅದರಲ್ಲಿ ನಾವು ಸಣ್ಣ ಧಾನ್ಯದ ತಾಲ್ಲೂಕನ್ನು ಹುಡುಕಬೇಕು. ಅದರಲ್ಲಿ ಪಚ್ಚೆ, ಹೂವು ಕಾಣಿ ಉಸುರುವುದನ್ನು ಉಸುರಿ ಹೋಗಿರುವುದನ್ನೂ ಕೂಡ ನಾವೇ ಗುರುತಿಸಬೇಕು. ಈ ರೀತಿಯಲ್ಲಿ ನಿಮ್ಮ ಇಲಾಖೆಯು ಪದ್ಧತಿ ಕಾರ್ಯಕ್ರಮವನ್ನು ಅಳವಡಿಸುತ್ತಿದ್ದಾರೆ. ಮೊದಲು ಅದನ್ನು ಕೈಬಿಡಬೇಕು. ಮೊದಲನೆಯದಾಗಿ ತಾವು ಮಾಡಬೇಕಾಗಿರುವುದು ಏನೆಂದರೆ, ಈ ವಿಲೇಜ್ ಅಕೌಂಟೆಂಟ್ಸ್ ಅಯಾಯ ಗ್ರಾಮದಲ್ಲಿ ಕಡ್ಡಾಯವಾಗಿ ಇರಲೇಬೇಕು. ಒಂದು ವೇಳೆ ಅವನು ಇಲ್ಲದಿದ್ದರೆ ಅವನನ್ನು ಪಾತ್ರ ಮಾಡಬೇಕು. ಎರಡನೇಯದು, ಬೆಳೆಯ ಆಧಾರದ ಮೇಲೆ ಬರಗಾಲ ಪ್ರದೇಶವನ್ನು ತೀರ್ಮಾನ ಮಾಡಬೇಕು. ಸ್ಯಾಂಪಲ್ ಕ್ರಾಪ್‌ಕಟ್ಟಿಂಗ್ ಎಕ್ಸ್‌ಪೇರಿಮೆಂಟ್ಸ್ ಮಾಡಲೇಬೇಕು. ಆ ಕಾರಣದಿಂದ ತಾವು ಆ ಕ್ರಮ ತೆಗೆದುಕೊಂಡರೆ ಅನುಕೂಲವಾಗುತ್ತದೆ. ಏಕೆಂದರೆ, ನೀರಾವರಿ ಪ್ರದೇಶ ಒಂದನ್ನು ಬಿಟ್ಟು ಬೇರೆ ಎಲ್ಲಾ ಮಳೆ ಆಧಾರಿತ ಪ್ರದೇಶವೂ ಬರಗಾಲ ಪೀಡಿತಪ್ರದೇಶವಾಗಿದೆ ಇದಕ್ಕೆ ಕಾರಣ ಅಕಾಲ ಮಳೆಯಿಂದಾಗಿ. ದಯವಿಟ್ಟು ತಾವು ಈ ವಿಚಾರವನ್ನು ಮಾಡಿ.

ಅಧ್ಯಕ್ಷರು.—ಸದನದಲ್ಲಿ ಬರಗಾಲದ ಕುರಿತು ಡಿಸ್‌ಕಷನ್ ಪ್ರಾರಂಭವಾಗುತ್ತದೆ. ಆಗ ಎಲ್ಲಾ ವಿಚಾರಗಳೂ ಕೂಡ ಪ್ರಸ್ತಾಪ ಮಾಡಬಹುದು. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅನಿಸಿಕೆಗಳನ್ನು ಏನು ಹೇಳಬೇಕೆಂದಿದ್ದಾರೆ ಆಗ ಅವರೆಲ್ಲರಿಗೂ ಅವಕಾಶ ಸಿಗುತ್ತದೆ

ದೇವಸ್ಥಾನಗಳಿಗೆ ಸಹಾಯಧನ

೨೬೯ ಶ್ರೀ ಬಸವರಾಜು (ಬ್ರಹ್ಮಾವರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ತಿಳಿಸುವರೆ :

(ಅ) ಮಾಜರಾಯಿ ಇಲಾಖೆಯಿಂದ ದಕ್ಷಿಣ ಕನ್ನಡದಲ್ಲಿ ನೋಂದಾಯಿತವಾದ ದೇವಸ್ಥಾನಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ದೇವಸ್ಥಾನಗಳಿಗೆ ತಸ್ತೀಕ್ ಅಥವಾ ಸಹಾಯ ಧನ ನೀಡಲಾಗುತ್ತಿದೆಯೇ ? ಹಾಗಿದ್ದಲ್ಲಿ ತಸ್ತೀಕು ನೀಡಲು ಅನುಸರಿಸುತ್ತಿರುವ ನಿಯಮಗಳೇನು?

(ಇ) ಈ ತಸ್ತೀಕ್ ನೀಡುವ ಹಣದ ಪ್ರಮಾಣ ನಿಗದಿ ಪಡಿಸಿದ್ದು ಯಾವಾಗ ? ಪುನರ್ ವಿಮರ್ಶೆ ಮಾಡದೆ ಎಷ್ಟು ಸಮಯವಾಗಿದೆ ? ತಸ್ತೀಕ್ ಹಣದ ಪ್ರಮಾಣವನ್ನು ಜಾಸ್ತಿ ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

(ಅ) ೪೧೦ ದೇವಸ್ಥಾನಗಳು ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇದೆ.

೧	ಮಂಗಳೂರು	೮೦ ದೇವಸ್ಥಾನಗಳು
೨	ಕುಂದಾಪುರ	೪೯ ದೇವಸ್ಥಾನಗಳು
೩	ಉಡುಪಿ	೧೧೬ ದೇವಸ್ಥಾನಗಳು
೪	ಕಾರ್ಕಳ	೫೪ ದೇವಸ್ಥಾನಗಳು
೫	ಬಂಟ್ವಾಳ	೪೪ ದೇವಸ್ಥಾನಗಳು
೬	ಬೆಳ್ತಂಗಡಿ	೨೩ ದೇವಸ್ಥಾನಗಳು
೭	ಸುಳ್ಯ	೧೬ ದೇವಸ್ಥಾನಗಳು
೮	ಪುತ್ತೂರು	೨೮ ದೇವಸ್ಥಾನಗಳು
	ಒಟ್ಟು	೪೧೦ ದೇವಸ್ಥಾನಗಳು

(ಆ) ಈ ದೇವಸ್ಥಾನಗಳಿಗೆ ತಸ್ತೀಕ್ ನೀಡಲಾಗುತ್ತಿದೆ. ಹಿಂದಿನ ಮದ್ರಾಸ್ ಹಿಂದೂ ಎಂಡೋಮೆಂಟ್ ಬೋರ್ಡ್ ಆರ್ಡರ್ ಪ್ರಕಾರ ಪಾವತಿಸಲಾಗುತ್ತಿದೆ.

(ಇ) ೧೯೨೯ರಲ್ಲಿ ೬೦ ವರ್ಷಗಳಾಗಿದೆ ಸದ್ಯಕ್ಕೆ ಪ್ರಸ್ತಾವನೆಯಿರುವುದಿಲ್ಲ.

ಶ್ರೀ ಪಿ. ಬಸವರಾಜ್, —ಈ ದೇವಸ್ಥಾನಗಳಿಗೆ ತಸ್ತೀಕ್ ಹಣವನ್ನು ನಿಗದಿ ಮಾಡಿದ್ದು ಯಾವಾಗ ? ಎಂದು ಕೇಳಿದ್ದೇನೆ. ಅದರ ಸುಪಾರು ೧೯೨೯ರಲ್ಲಿ ಎಂದು ಉತ್ತರಿಸಿದ್ದಾರೆ. ಅಂದರೆ ತಸ್ತೀಕ್ ನಿಗದಿಯಾದುದು ಸುಮಾರು ೬೦ ವರ್ಷಗಳ ಹಿಂದೆ ಎಂದಂತಾಯಿತು. ಈ ದೇವಸ್ಥಾನಗಳ ಪರಿಸ್ಥಿತಿಯು ಈಗ ಏನಾಗಿದೆ ಅಂದರೆ, ಕೆಲವು ದೇವಸ್ಥಾನಗಳಿಗೆ ಆದಾಯವು ಸ್ವಲ್ಪ ಮಟ್ಟಿಗೆ ಜಾಸ್ತಿ ಇರಬಹುದು, ಕೆಲವು ದೇವಸ್ಥಾನಗಳಿಗೆ ಆದಾಯವೇ ಇಲ್ಲ, ಇದ್ದರೂ ಬಹಳ ಕಡಿಮೆ ಪ್ರಮಾಣದಲ್ಲಿ ಇದೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು. ಅದರಲ್ಲಿ ಭೂ–ಸುಧಾರಣ ಕಾನೂನು ಜಾರಿಯಲ್ಲಿ ತಂದಿದ್ದು ಕೂಡ ಇದೆ. ದೇವಸ್ಥಾನಗಳ ಜಮೀನು ಈಗ ಉಳುವವರ ಹಕ್ಕಿನದಾಗಿದೆ. ಹೀಗಾಗಿ ಮತ್ತು ಇತರ ಕಾರಣಗಳಿಂದಾಗಿ ಕೆಲವಾರು ದೇವಸ್ಥಾನಗಳಿಗೆ ದೈನಂದಿನ ನೈವೇದ್ಯದ ವಿಚಾರವು ಮಾಡಲು ಕೂಡ ಆದಾಯವು ಕೊರತೆ ಉಂಟಾಗಿದೆ. ಆದುದರಿಂದ ಈ ತಸ್ತೀಕನ್ನು ರಿವೈಸ್ ಮಾಡುವ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಸದಸ್ಯರು ಈ ಕಾರಿತಂ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅಂತೆಯೇ ಈ ತಸ್ತೀಕ್ ಅಲೋವೆನ್ಸ್ ೧೯೨೯ರಲ್ಲಿ ಫಿಕ್ಸ್ ಮಾಡಿದ್ದು ಎಂದು ಕೂಡ ಹೇಳಿದ್ದಾರೆ. ಅಂದಿನಿಂದ ಇಂದಿನವರೆವಿಗೂ ಆದು ರಿವೈಸ್ ಆಗಿಲ್ಲ ಎಂದು ಹೇಳಿದ್ದಾರೆ. ಈ ಕಾರಿತು ನಾವು ಒಂದು ಯೂನಿಫಾರ್ಮ್ ಎಂಡೋಮೆಂಟ್ ಬಿಲ್ ತರಬೇಕೆಂದು ಯೋಚನೆ ಮಾಡಿದ್ದೇವೆ. ಅದನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ. ಅದು ಬಂದಾಗ ಎಲ್ಲೆಲ್ಲಿ ತಸ್ತೀಕ್ ಅಲೋವೆನ್ಸ್ ಯಾವ ರೀತಿಯಾಗಿ ಕೊಡಬೇಕು ಎಂಬ ಬಗ್ಗೆ ಆ ರೂಲ್ಸ್‌ನಲ್ಲಿ ಅಳವಡಿಸಿಕೊಳ್ಳುತ್ತೇವೆ. ಆ ಬಿಲ್ ಬಂದರೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಗುತ್ತದೆ ಎಂದು ಭಾವಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ. — ಮಾನ್ಯ ಸಚಿವರು ದೇವಸ್ಥಾನಗಳಿಗೆ ತಸ್ತೀಕ್ ನೀಡುವುದು ಹಿಂದಿನ ಮದ್ರಾಸ್ ಹಿಂದೂ ಎಂಡೋಮೆಂಟ್ ಬೋರ್ಡ್ ಆರ್ಡರ್ ಪ್ರಕಾರ ಎಂದು ಹೇಳಿದ್ದಾರೆ. ನಾವು ಹಿಂದಿನ ಮಾನ್ಯ ಕಂದಾಯ ಸಚಿವರ ಜೊತೆಯಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿದಾಗ ಹಲವಾರು ವಿಚಾರಗಳನ್ನು ಚರ್ಚಿಸಿದ್ದೇವೆ. ಈ ರಾಜ್ಯದಲ್ಲಿ ಐದು ರೀತಿಯ ಶಾಸನಗಳು ಜಾರಿಯಲ್ಲಿವೆ.

ಮೈಸೂರು ವಿಭಾಗಕ್ಕೆ ಒಂದು, ಕೊಡಗಿಗೆ ಒಂದು, ಮುಂಬೈ ಕರ್ನಾಟಕಕ್ಕೆ ಒಂದು, ಹೈದ್ರಾಬಾದ್ ಕರ್ನಾಟಕಕ್ಕೆ ಒಂದು. ದಕ್ಷಿಣ ಕನ್ನಡ ಜಿಲ್ಲೆಗೆ ಒಂದು—ಹೀಗೆ ಬೇರೆ ಬೇರೆ ರೀತಿಯಲ್ಲಿ ಎಂಡೋಮೆಂಟ್ ಶಾಸನಗಳು ಜಾರಿಯಲ್ಲಿವೆ. ಇವೆಲ್ಲವನ್ನೂ ಕ್ರೋಢೀಕರಿಸಿ ಒಂದು ಕಾಂಪ್ರಹೆನ್ಸಿವ್ ಬಿಲ್‌ನ್ನು ತರುತ್ತೇವೆ ಎಂದು ಸರ್ಕಾರ ಆಗ ಹೇಳಿದ್ದರು. ಆದನ್ನು ಈ ಅಧಿವೇಶನದಲ್ಲಿಯೇ ತರುತ್ತೇವೆ ಎಂದು ಕೂಡ ಹೇಳಿದ್ದಾರೆ. ಅಂಥ ಒಂದು ವ್ಯವಸ್ಥೆ ಈ ಕಾರಿತಾಗಿ ಆಗಿದಯೇ ಎಂದು ದಯವಿಟ್ಟು ತಿಳಿಸಬೇಕು, ಹೊಗೆಯೇ ೧೯೫೯ರಲ್ಲಿ ನಿಗದಿ ಮಾಡಿದ ತಸ್ತೀಕ್‌ನ್ನು ಗಮನದಲ್ಲಿ ತೆಗೆದುಕೊಂಡರೆ, ಆಗ ರೂಪಾಯಿಯ ಬೆಲೆ ಎಷ್ಟಿತ್ತು ? ಈಗ ಎಷ್ಟಾಗಿದೆ ? ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಅರ್ಚಕರಿಗೆ ೩ ರೂಪಾಯಿಗಳನ್ನು ಸರ್ಕಾರದ ವತಿಯಿಂದ ಕೊಡುತ್ತಿದ್ದೀರಿ. ಅದನ್ನು ಕೊಡದಿರುವುದೇ ಒಳ್ಳೆಯದು ಎಂದು ಕಾಣುತ್ತದೆ. ಈಗಲಾದರೂ ಇಂಥ ನ್ಯೂನತೆಗಳನ್ನು ಈಗ ತರುವ ಬಿಲ್‌ನಲ್ಲಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಎರಡನೇ ಸಲ ಮಾಡಿದ್ದು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಯೂನಿಫಾರ್ಮ್ ಬೆಲೆ ತರುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಒಂದೊಂದು ಏರಿಯಾದಲ್ಲಿ ಒಂದೊಂದು ತರಹದ ಪದ್ಧತಿ ಇದೆ. ಅದಕ್ಕೆ ಯೂನಿಫಾರ್ಮ್ ಆರ್ಡರ್ ಮಾಡುತ್ತೇವೆ. ಕಾನೂನು ಇಲಾಖೆಯವರು ಸ್ಕ್ರೂಟಿನಿ ಮಾಡಿ ಕಳಿಸಿದರೆ ಇದೇ ಸೆಷನ್‌ನಲ್ಲಿ ತರುತ್ತೇವೆ, ಇಲ್ಲದಿದ್ದರೆ ಅಡಿಷನಲ್ಸ್ ಮುಂಖಾಂತರವಾದರೂ ಇತ್ಯಾ ಮಾಡುತ್ತೇವೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಕಂದಾಯ ಸಚಿವರೂ ಕೂಡ ತಸ್ತೀಕ್ ಕಡಿಮೆ ಇದೆ, ಯಾವುದಕ್ಕೂ ಸಾಲುವುದಿಲ್ಲ ಎಂದು ಹೇಳಿದರು. ೧೯೫೯ರ ತಸ್ತೀಕ್ ಆಕ್ಟ್ ಪ್ರಕಾರ ಅದು ಇದೆ. ನಾನು ಸರ್ಕಾರವನ್ನು ಅನೇಕ ವರ್ಷಗಳಿಂದ ಸದನದಲ್ಲಿ ಮತ್ತು ಮಂತ್ರಿಮಂಡಲದಲ್ಲಿದ್ದಾಗಲೂ ಒಂದು ಎಂಡೋಮೆಂಟ್ ಬೋರ್ಡ್ ಮಾಡಿ ಎಂದು ಕೇಳುತ್ತಿದ್ದೇನೆ. ಹಿಂದಿನ ಸರ್ಕಾರ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ನಮ್ಮ ದೇವಸ್ಥಾನಗಳು ಶಿಲ್ಪಕಲೆ ಅಥವಾ ಬೇರಾವುದೇ ರೀತಿಯಿಂದಲೂ ಒಳ್ಳೆಯ ದೇವಸ್ಥಾನಗಳೆ. ಅವುಗಳ ಮೇಂಟೆನೆನ್ಸ್ ಬಹಳ ಕಷ್ಟಕರವಾಗಿ ನಡೆಯುತ್ತಿದೆ. ಅವರಿಗೆ ಕೊಡುತ್ತಿರುವ ೩ ರೂಪಾಯಿ ಯಾವುದಕ್ಕೂ ಸಾಲುವುದಿಲ್ಲ. ಆದ್ದರಿಂದ ಸರ್ಕಾರ ಎಂಡೋಮೆಂಟ್ ಬೋರ್ಡ್‌ನ್ನು ಇನ್ನು ಮುಂದೆಯಾದರೂ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ನಾನು 'ಎ' ಗ್ರೇಡ್ ಕಾಯಿದೆ ತರುತ್ತೇವೆಂದು ಹೇಳಿದ್ದೇನೆ. ಅದು ಚರ್ಚೆಗೆ ಬಂದಾಗ ತಾವು ಸಲಹೆಗಳನ್ನು ಕೊಡಿ.

(ಶ್ರೀ ಆಂಜನೆಮೂರ್ತಿಯವರು ಗೈರು ಹಾಜರಾಗಿದ್ದಾರೆ.)

ಬರಗಾಲಕ್ಕೆ ತುತ್ತಾದ ಪ್ರದೇಶಗಳ ಅಭಿವೃದ್ಧಿ

೯೪. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಬರಗಾಲದ ಪರಿಸ್ಥಿತಿ ಉದ್ಭವವಾಗಿದೆ ?

ಆ) ಇಲ್ಲಿಯವರೆಗೆ ಬರಗಾಲ ಕಾಮಗಾರಿಗಳಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು)

ಇ) ಮುಂಬೈ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರದ ವಿಶೇಷ ಕಾರ್ಯಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ೨೫.

ಆ) ಜಿಲ್ಲಾವಾರು ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಿದೆ.

ಇ) ನೊಂದ ಸಂತ್ರಸ್ತರಿಗೆ ಉದ್ಯೋಗ ಒದಗಿಸುವುದು, ನೀರಾವರಿ, ಭೂ ಸಂರಕ್ಷಣೆ, ಅರಣ್ಯಾಭಿವೃದ್ಧಿ, ರಸ್ತೆ ನಿರ್ಮಾಣ, ತೆರೆದ ಬಾವಿ ಹಾಗೂ ಕೊಳವೆ ಬಾವಿಗಳ ನಿರ್ಮಾಣ ಇತ್ಯಾದಿ ಕಾರ್ಯಕ್ರಮಗಳನ್ನು 'ಯೋಜನಾ ಕಾರ್ಯಗಳಡಿಯಲ್ಲಿ ಕೈಗೊಳ್ಳಲಾಗುತ್ತಿದೆ. ಇವುಗಳ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಭಾವ ಪರಿಹಾರದಡಿಯಲ್ಲಿ ಹಣವನ್ನು